ಎಚ್.ಕೆ. ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಸಚಿವರು ಹಾಗೂ
ಗದಗ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ ಸಂಖ್ಯೆ: 22258094
22033492
ಕೊಠಡಿ ಸಂಖ್ಯೆ: 329
ವಿಧಾನ ಸೌಧ
ಬೆಂಗಳೂರು – 560 001

ಸಂ: ಗ್ರಾಅಪ/ 636 / 2016-17

ದಿನಾಂಕ : 15.06.2016

ಪ್ರಿಯ ಜನನಾಯಕರೇ,

**ವಿಷಯ: 'ನಮ್ಮ ಗ್ರಾಮ ನಮ್ಮ ಯೋಜನೆ' ಯನ್ನು ಸಿದ್ಧಪಡಿಸುವುದರ ಬಗ್ಗೆ**

* * * * *

ಕರ್ನಾಟಕ ರಾಜ್ಯದಲ್ಲಿ ಮೂರು ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದ ಮಾನ್ಯಶ್ರೀ ಸಿದ್ದರಾಮಯ್ಯ ನೇತೃತ್ವದ ಸರಕಾರ ಗ್ರಾಮಗಳನ್ನು ಸ್ವಾಭಿಮಾನಿ, ಸ್ವಾವಲಂಬಿ, ಸಮೃದ್ಧ ಹಾಗೂ ಆರೋಗ್ಯವಂತ, ನೆಮ್ಮದಿಯ ತಾಣಗಳನ್ನಾಗಿ ಮಾಡಲು, ಅವು ಶೋಷಣೆ ಮುಕ್ತ, ವ್ಯಾಜ್ಯಮುಕ್ತ, ಭಯಮುಕ್ತ, ಋಣಮುಕ್ತ, ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿ ಪರಿವರ್ತಿಸಲು ಸಮರ್ಪಿತವಾಯಿತು.

ಭಾರತದ ಸಂವಿಧಾನಕ್ಕೆ ತರಲಾದ 73ನೇ ತಿದ್ದುಪಡಿ ಪಂಚಾಯತ ರಾಜ್ ವ್ಯವಸ್ಥೆಗೆ ಸಂವೈಧಾನಿಕ ಬದ್ಧತೆ ಹಾಗೂ ವೇದಿಕೆ ಒದಗಿಸುವ ಮಹತ್ವದ ಕಾರ್ಯ ಮಾಡಿದೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ಸಾಕಾರಗೊಳಿಸಲು ಕರ್ನಾಟಕ ಗ್ರಾಮ ಸ್ವರಾಜ್ಯ ಹಾಗೂ ಪಂಚಾಯತ ರಾಜ್ ಅಧಿನಿಯಮ ಜಾರಿಗೆ ತರುವುದರ ಮೂಲಕ ರಾಜ್ಯದಲ್ಲಿ ಪಂಚಾಯತ ರಾಜ್ ವ್ಯವಸ್ಥೆಯನ್ನು ಜನಪರ, ಜನ ಸ್ನೇಹಿಯನ್ನಾಗಿ ಮಾಡಲು ಅದನ್ನು ಸಶಕ್ತಗೊಳಿಸಲು ಸಾಕಷ್ಟು ಚಿಂತನ-ಮಂಥನ ನಡೆಸಿ ಕ್ರಮ ಕೈಗೊಂಡಿರುವುದು ತಮಗೆಲ್ಲ ತಿಳಿದ ವಿಷಯವಾಗಿದೆ.

ಸಂವಿಧಾನದ 73ನೇ ತಿದ್ದುಪಡಿ ಪಂಚಾಯತ ರಾಜ್ ಸಂಸ್ಥೆಗಳಿಗೆ ಹಾಗೂ ಅವುಗಳ ಜನ ಪ್ರತಿನಿಧಿಗಳಿಗೆ ಮಾತ್ರ ಅಧಿಕಾರ ಹಾಗೂ ಅವಕಾಶಗಳನ್ನು ಒದಗಿಸಲು ಸೀಮಿತಗೊಂಡಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೈಜ ಪ್ರಭುಗಳಾದ ಶ್ರೀಸಾಮಾನ್ಯರ ಪಾಲ್ಗೊಳ್ಳುವಿಕೆ ಆಡಳಿತದ ನಿರ್ಣಯಾತ್ಮಕ ಹಂತಗಳಲ್ಲಿ ಪಾಲ್ಗೊಳ್ಳುವ ಸಂವೈಧಾನಿಕ ಅವಕಾಶಗಳನ್ನು ಒದಗಿಸಿದೆ. ಅದಕ್ಕಾಗಿ **"ಗ್ರಾಮ ಸಭೆ"** ಸಂಸ್ಥೆಯನ್ನು ಹುಟ್ಟು ಹಾಕಿದೆ. ಕರ್ನಾಟಕ ಸರಕಾರ ಹೊಸ ಕಾಯ್ದೆಯಲ್ಲಿ ಜನವಸತಿ ಸಭೆ ಅಸ್ತಿತ್ವಕ್ಕೆ ತಂದು ಕಟ್ಟಕಡೆಯ ಮನುಷ್ಯನಿಗೂ ಸೂಕ್ತ ಫಲಾನುಭವಿ ಆಯ್ಕೆ ಮಾಡುವಲ್ಲಿ ನಿರ್ಣಾಯಕ ಪಾತ್ರ ನೀಡಿದೆ. ತನ್ಮೂಲಕ ಯೋಜನೆಗಳನ್ನು ರೂಪಿಸಿ, ಅನುಷ್ಠಾಗೊಳಿಸಲು ಸಿದ್ಧಪಡಿಸಿ ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟಕ್ಕೆ ಮೇಲ್ಮುಖವಾಗಿ ಸಾಗಲು ಬುನಾದಿ ಹಾಕಿದೆ. ಗ್ರಾಮೀಣ ಪ್ರದೇಶದ ಜನರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ

**ಎಚ್.ಕೆ. ಪಾಟೀಲ**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಸಚಿವರು ಹಾಗೂ
ಗದಗ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ ಸಂಖ್ಯೆ: 22258094
22033492
ಕೊಠಡಿ ಸಂಖ್ಯೆ: 329
ವಿಧಾನ ಸೌಧ
ಬೆಂಗಳೂರು – 560 001

ತಂದು ಅವರ ಜೀವನಮಟ್ಟ ಉತ್ತಮ ಪಡಿಸುವ ಉದ್ದೇಶ ಹೊಂದಿರುವ ಹೊಸ ಕಾಯ್ದೆ ನಮ್ಮ ಗ್ರಾಮೀಣರ ಬದುಕಿನಲ್ಲಿ ಬದಲಾವಣೆಯ ತಂಗಾಳಿ ಬೀಸುವಂತೆ ಮಾಡಲು ಬುನಾದಿ ಹಾಕಿದೆ.

ಈ ಕಾಯ್ದೆಯ ಸದಾಶಯಗಳ ಸಾಧನೆಗಾಗಿ ರಾಜ್ಯದಲ್ಲಿ ಗ್ರಾಮ ಪಂಚಾಯತಗಳ ಅಭಿವೃದ್ಧಿ ಮುನ್ನೋಟ (ಜಿ.ಪಿ.ಡಿ.ಪಿ.) ತಯಾರಿಕೆ ಪ್ರಕ್ರಿಯೆ ಭಾಗವಾಗಿ **"ನಮ್ಮ ಗ್ರಾಮ ನಮ್ಮ ಯೋಜನೆ"**ಯನ್ನು ಜಾರಿಗೆ ತಂದಿದೆ. ಈ ಯೋಜನೆಯ ಅನುಷ್ಠಾನದಲ್ಲಿ ಜನನಾಯಕರಾದ ತಾವು ಸಂಪೂರ್ಣವಾಗಿ ಆಸಕ್ತಿಯಿಂದ ಸಕ್ರೀಯವಾಗಿ ತೊಡಗಿಸಿಕೊಳ್ಳಬೇಕೆಂದು ಕೋರುವೆ.

ಈ ಯೋಜನೆಯ ತಯಾರಿಕೆಗೆ ಸಂಬಂಧಿಸಿದಂತೆ, ಮೈಸೂರಿನಲ್ಲಿ ಅಬ್ದುಲ್ ನಜೀರಸಾಬ ರಾಜ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ ರಾಜ್ ಸಂಸ್ಥೆಯಿಂದ ತರಬೇತಿ ವ್ಯವಸ್ಥೆಗೊಳಿಸಿದ್ದಿತು. ಈ ತರಬೇತಿಯಲ್ಲಿ ಪಾಲ್ಗೊಂಡು ಅನುಭವ ಪಡೆದಿರುವ ತಾವು ಈಗ ಯೋಜನೆ ತಯಾರಿಕೆಯನ್ನು ಅರ್ಥಪೂರ್ಣವಾಗಿ ಮಾಡುವ ಗುರುತರ ಹೊಣೆಗಾರಿಕೆ ನಿರ್ವಹಿಸಬೇಕಾಗಿದೆ.

ಜನ ಸಹಭಾಗಿತ್ವದ ಪ್ರಜಾ ಪ್ರಭುತ್ವ ವ್ಯವಸ್ಥೆ ಅರ್ಥಪೂರ್ಣವಾಗಬೇಕಾದರೆ ಜನರ ಧ್ವನಿ ಆಡಳಿತದಲ್ಲಿ ಪ್ರತಿ ಧ್ವನಿತವಾಗಬೇಕು. ಅವರ ಬೇಡಿಕೆಗಳು ಈಡೇರಬೇಕು. ಅದಕ್ಕಾಗಿ ಕೆಳಹಂತದಿಂದ ಯೋಜನೆಗಳು ರೂಪಿಸಬೇಕಾದುದು ಅನಿವಾರ್ಯವಾಗಿದೆ.

ಗ್ರಾಮೀಣ ಭಾಗದ ಜನರ ಪಾಲ್ಗೊಳ್ಳುವಿಕೆಯಿಂದ ರೂಪಿತವಾದ ಯೋಜನೆಗಳು ಜನರ ನೈಜ ಬೇಡಿಕೆಗಳನ್ನು ಅನಾವರಣಗೊಳಿಸುವದರೊಂದಿಗೆ ಜನರ ಜೀವನಮಟ್ಟ ಸುಧಾರಣೆಗೆ ಪೂರಕ ಪೋಷಕವಾಗಲಿವೆ. ಗ್ರಾಮ ಮಟ್ಟದಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ರಾಜ್ಯದಲ್ಲಿ ಜಾರಿಗೆ ಬಂದಿರುವ ಹೊಸ ಕಾಯ್ದೆ ಶಾಸನಾತ್ಮಕ ಬೆಂಬಲ ಒದಗಿಸಿದೆ.

ಕಾಯ್ದೆಯ ಕಲಂ ೩ಇ ಗ್ರಾಮ ಸಭೆಯು, ಗ್ರಾಮ ಪಂಚಾಯತಿಯಲ್ಲಿ ಅನುಷ್ಠಾನಗೊಳ್ಳುವ ಎಲ್ಲಾ ರೀತಿಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಕೇಂದ್ರ, ರಾಜ್ಯ, ಜಿಲ್ಲಾ ವಲಯದ ಎಲ್ಲ ಸರಕಾರಿ ಯೋಜನೆಗಳನ್ನು ಯೋಜಿಸುವಲ್ಲಿ, ಅನುಷ್ಠಾನಗೊಳಿಸುವುದರಲ್ಲಿ ಮೇಲ್ವಿಚಾರಣೆ ಮಾಡುವುದರಲ್ಲಿ ಮತ್ತು ಮೌಲ್ಯ ಮಾಪನ ಮಾಡುವುದರಲ್ಲಿ ಎಲ್ಲ ಪ್ರಜೆಗಳು ನೇರವಾಗಿ ಭಾಗಿಯಾಗುವುದನ್ನು ಸುನಿಶ್ಚಿತಗೊಳಿಸಲು ಗ್ರಾಮ ಸಭಾ ಗ್ರಾಮ ಮಟ್ಟದಲ್ಲಿ ಸ್ಥಳೀಯ ಸ್ವಯಂ ಆಡಳಿತದ ಮೂಲ ಘಟಕವಾಗಿರತಕ್ಕದ್ದು ಎಂದಿದೆ. ಅಲ್ಲದೆ ಕಲಂ (ಇ) ಪ್ರತಿಯೊಂದು ಜನವಸತಿ ಸಭಾಗಳ ಹಾಗೂ ವಾರ್ಡ ಸಭಾಗಳ ಅಗತ್ಯಗಳನ್ನು, ಶಿಫಾರಸ್ಸುಗಳನ್ನು, ಸಲಹೆಗಳನ್ನು ಪರಿಗಣಿಸಿದ ನಂತರ **"ಆದ್ಯತೆ ರ್ಯಾಂಕಿಂಗ್"** ವಿಧಾನದಿಂದ

ಎಚ್.ಕೆ. ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಸಚಿವರು ಹಾಗೂ
ಗದಗ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ ಸಂಖ್ಯೆ: 22258094
22033492
ಕೊಠಡಿ ಸಂಖ್ಯೆ: 329
ವಿಧಾನ ಸೌಧ
ಬೆಂಗಳೂರು – 560 001

ಪಂಚಾಯತ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಎಲ್ಲ ಯೋಜನೆಗಳ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಆಧ್ಯತೆಯನ್ನು ನಿರ್ಧರಿಸುವ ಮೂಲಕ ಕ್ರೂಢಿಕೃತ ಪ್ರಸ್ತಾವನೆ ಸಿದ್ಧಪಡಿಸುವುದು ಎಂದು ಸ್ಪಷ್ಟ ಪಡಿಸಿದೆ.

ಗ್ರಾಮೀಣ ಯೋಜನೆಗಳನ್ನು ಫಲ ಪ್ರದಗೊಳಿಸಲು ರಾಜ್ಯ ಹಣಕಾಸು ಆಯೋಗ ಶಿಫಾರಸ್ಸು ಮಾಡುವ ಅನುದಾನದಲ್ಲಿ ಶೇ.20 ರಷ್ಟು ಅನುದಾನವನ್ನು ಮುಕ್ತ ಅನುದಾನವನ್ನಾಗಿ ಬಳಸಿಕೊಳ್ಳಲು ಗ್ರಾಮ ಪಂಚಾಯತಿಗಳಿಗೆ ಅವಕಾಶ ನೀಡಿ ರಾಜ್ಯ ಸರಕಾರ ವಿಕೇಂದ್ರಿಕರಣದ ದಿಶೆಯಲ್ಲಿ ಅತ್ಯಂತ ಮಹತ್ವದ ಕ್ರಾಂತಿಕಾರಿ ಹೆಜ್ಜೆಯನ್ನಿರಿಸಿದೆ.

ಈ ದಿಶೆಯಲ್ಲಿ ರಾಜ್ಯದ ಎಲ್ಲ 6019 ಗ್ರಾಮ ಪಂಚಾಯತಗಳಲ್ಲಿ ಇದೇ ದಿನಾಂಕ:10.07.2016ರೊಳಗೆ **"ನಮ್ಮ ಗ್ರಾಮ ನಮ್ಮ ಯೋಜನೆ"** ಸಿದ್ಧ ಪಡಿಸುವುದಕ್ಕಾಗಿ ಜನವಸತಿ ಸಭೆಗಳನ್ನು, ವಾರ್ಡ ಸಭೆಗಳನ್ನು ಹಾಗೂ ಗ್ರಾಮ ಸಭೆಯನ್ನು ನಡೆಸಬೇಕೆಂದು ವಿನಂತಿಸುವೆ.

ದಿನಾಂಕ:20.07.2016ರೊಳಗೆ ಗ್ರಾಮ ಪಂಚಾಯತ **"ಯೋಜನಾ ಸಹಾಯಕ ಸಮಿತಿ"**ಯ ಸದಸ್ಯರೆಲ್ಲ ಸಭೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಸೃಜನಾತ್ಮಕ ಹಾಗೂ ರಚನಾತ್ಮಕ ಪಾತ್ರ ನಿರ್ವಹಿಸಬೇಕು. ದಿನಾಂಕ:09.08.2016ರೊಳಗೆ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಸಾಮಾನ್ಯ ಸಭೆ ನಡೆಸಿ **"ನಮ್ಮ ಗ್ರಾಮ ನಮ್ಮ ಯೋಜನೆ"** ಅನುಮೋದಿಸಬೇಕು. ಅಗಷ್ಟ 9 ದೇಶದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಅಗಷ್ಟ ಕ್ರಾಂತಿಯಂದೇ ಅವಿಸ್ಮರಣೀಯವಾದ ದಿನ. ಗ್ರಾಮ ಸ್ವರಾಜ್ಯ ಸಾಧನೆಯ ಪಥದಲ್ಲಿ ಈ ಅಗಷ್ಟ 9, 2016 ಅವಿಸ್ಮರಣೀಯವಾಗಲಿ. ಅಂದು ದೇಶವನ್ನು ಪರಕೀಯರ ಆಡಳಿತದಿಂದ ಮುಕ್ತಗೊಳಿಸುವ ಗುರಿ ಇತ್ತು. ಇಂದು ಗ್ರಾಮಗಳನ್ನು ದೌರ್ಭಲ್ಯಗಳಿಂದ ಮುಕ್ತಗೊಳಿಸುವ ಗುರಿ ಇರಲಿ. ಅಂದು "ಮಾಡು ಇಲ್ಲವೇ ಮಡಿ" ಎಂದು ಬಾಪೂಜಿ ಕರೆ ನೀಡಿದ್ದರು. ಇಂದು ತಾವು ಸ್ವಾವಲಂಭನೆಯತ್ತ, ಸಮಾನತೆಯತ್ತ, ಸಮೃದ್ಧಿಯತ್ತ ಹೆಜ್ಜೆ ಇಡಿ ಎಂದು ಘೋಷಿಸಿ ಕಾರ್ಯಮಗ್ನರಾಗಿರಿ. ತನ್ಮೂಲಕ ಗ್ರಾಮಾಭಿವೃದ್ಧಿಯ ಮುನ್ನೋಟ ಪ್ರಕ್ರೀಯ ಪೂರ್ಣಗೊಳಿಸಿ ನಿಗಧಿಪಡಿಸಿದ ತಂತ್ರಾಂಶದಲ್ಲಿ ಸಂಬಂಧಿಸಿದ ಅಧಿಕಾರಿ ಅಳವಡಿಸುವಂತೆ ನೋಡಿಕೊಳ್ಳುವ ಜವಾಬ್ದಾರಿಯುತ ಕೆಲಸ ತಮ್ಮದಾಗಿದೆ.

ಯೋಜನೆ ತಯಾರಿಕೆ ಸಂಪೂರ್ಣವಾಗಿ ಯಶಸ್ವಿಗೊಳಿಸಲು ಗ್ರಾಮ ಪಂಚಾಯತಿಯ ಸರ್ವ ಸದಸ್ಯರು, ಸಂಬಂಧಿಸಿದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವಂತೆ ಮಾಡಬೇಕು. ಇದಕ್ಕೆ ಪೂರಕವಾದ ವಾತಾವರಣ ಸೃಷ್ಟಿಸುವಲ್ಲಿ ಹಾಗೂ ಜನರ ಪಾಲ್ಗೊಳ್ಳುವಿಕೆ ಹೆಚ್ಚಾಗಿರುವಂತೆ ಮಾಡುವಲ್ಲಿ ಎಲ್ಲ ಚುನಾಯಿತ ಜನ ನಾಯಕರು ಶ್ರಮಿಸಬೇಕೆಂದು ಆಗ್ರಹಿಸುವೆ.

**ಎಚ್.ಕೆ. ಪಾಟೀಲ**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಸಚಿವರು ಹಾಗೂ
ಗದಗ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ ಸಂಖ್ಯೆ: 22258094
22033492
ಕೊಠಡಿ ಸಂಖ್ಯೆ: 329
ವಿಧಾನ ಸೌಧ
ಬೆಂಗಳೂರು – 560 001

ಗ್ರಾಮಗಳ ಆರ್ಥಿಕ ಸ್ಥಿತಿ ಬಹುತೇಕ ಕೃಷಿ ಮೇಲೆ ಅವಲಂಬಿತ. ಕೃಷಿ ಲಾಭದಾಯಕವಲ್ಲದ ವೃತ್ತಿಯಾಗಿದೆ ಆದರೆ ಲಾಭದಾಯಕವಾಗಬೇಕು, ಭೂಮಿಯ ಸತ್ವ ಹೆಚ್ಚಿಸಬೇಕು. ಈ ಸತ್ವಯುತ ಮಣ್ಣಿನ ಸಂರಕ್ಷಣೆಯಾಗಬೇಕು. ಅದೇ ಕಾಲಕ್ಕೆ ಮಳೆ ನೀರನ್ನು ಸದ್ವಿನಿಯೋಗ ಮಾಡಿ ಹೆಚ್ಚಿನದನ್ನು ಭೂದೇವಿಯ ಒಡಲು ತುಂಬಿಸುವ ಕೆಲಸಕ್ಕೆ ಆದ್ಯತೆ ದೊರೆಯಬೇಕು.

ನಮ್ಮ ಗ್ರಾಮಗಳು ಸ್ವಾವಲಂಬಿಗಳಾಗಲಿ, ಅಗತ್ಯವಾದ ಎಲ್ಲ ಸೌಲಭ್ಯಗಳಿಂದ ಸಜ್ಜಾಗಲಿ, ಯಾರೂ ಅವಕಾಶವಂಚಿತರಾಗದಿರಲಿ, ಸಮೃದ್ಧಿ ಸಾಧನೆಯತ್ತ ಸಾಗಲು ನೆರವಾಗಲಿ, ಬದುಕಿನ ಸಂಘರ್ಷದಲ್ಲಿ ಗ್ರಾಮಗಳಿಂದ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗಿರುವವರು ಸಮೃದ್ಧಿ, ನೆಮ್ಮದಿ ಪಡೆಯಲು ಮತ್ತೇ ಗ್ರಾಮಗಳಿಗೆ ಮರಳುವಂತಾಗಲಿ. ಸ್ವಚ್ಛತೆ, ನೈರ್ಮಲ್ಯ, ಆರೋಗ್ಯ ಎಲ್ಲರಿಗೂ ಸಿಗಲಿ, ಶುದ್ಧ ನೀರು ಎಲ್ಲರ ಹಕ್ಕಾಗಲಿ, ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ಸುನಿಶ್ಚಿತವಾಗಲಿ ಗ್ರಾಮಗಳಲ್ಲಿ ಶಾಂತಿ, ನೆಮ್ಮದಿ ನೆಲೆಸಲಿ ಹತಾಶೇ ಓಡಿಸಿ ವಿಶ್ವಾಸ ಮೂಡಿಸಲಿ, ಸಮಾನತೆಯ ಜೀವನ ಬದುಕಿನ ಭಾಗವಾಗಲಿ ಹಂಗಿನ ಬದುಕಿನಿಂದ ಹಕ್ಕಿನ ಬದುಕಿನತ್ತ ದಾಪುಗಾಲು ಇಡುವಂತಾಗಲಿ. ಅಂತಹ **"ಗ್ರಾಮಾಭಿವೃದ್ಧಿ ಮುನ್ನೋಟ"**ದಿಂದ ಗ್ರಾಮಗಳಲ್ಲಿ ಪ್ರಭುಗಳ ಧ್ವನಿ ಮೊಳಗಲಿ, ನೈಜ ಪ್ರಜಾ ಪ್ರಭುತ್ವದ ನವ ಮನ್ವಂತರ ಪ್ರಾರಂಭವಾಗಲೆಂದು ಹಾರೈಸುತ್ತ ಈ ಪವಿತ್ರ ಕಾರ್ಯದಲ್ಲಿ ತಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ವಿನಂತಿಸುತ್ತ ತಮಗೆ ಹೃತ್ಪೂರ್ವಕ ಶುಭಾಶಯಗಳನ್ನು ಕೋರುವೆ.

ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ

(ಎಚ್.ಕೆ.ಪಾಟೀಲ್)

ಅಧ್ಯಕ್ಷರು, ಗ್ರಾಮ ಪಂಚಾಯತಿ